**ಸಂತ ಜೋಸೆಫರ ವಾಣಿಜ್ಯ ಕಾಲೇಜು**

**ಸ್ವಾಯತ್ತ**

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಯೋಜನೆಗೆ ಒಳಪಟ್ಟಿದೆ

ನ್ಯಾಕ್ ನಾಲ್ಕನೆಯ ಆವರ್ತದಲ್ಲಿ ಅಕ್ರೆಡಿಟೇಷನ್ ಕೌನ್ಸಿಲ್‌ನಿಂದ ಎ++ ಶ್ರೇಣಿಯನ್ನು ಸಿಜಿಪಿಎ 4/3.57 ಅಂಕಗಳೊಂದಿಗೆ ಪಡೆದಿದೆ.

ಶ್ರೇಷ್ಠತೆಯ ಸಾಮರ್ಥ್ಯ ಹೊಂದಿದ ಕಾಲೇಜು (ಸಿಪಿಇ).

ಭಾರತ ಸರ್ಕಾರದ ಶಿಕ್ಷಣ ಇಲಾಖೆಯಿಂದ2021ನೇ ಸಾಲಿನ ಎನ್.ಐ.ಆರ್.ಎಫ್ ರ‍್ಯಾಂಕಿಂಗ್‌ನಲ್ಲಿ 74 ನೇ ರ‍್ಯಾಂಕ್ ಪಡೆದಿದೆ

# 163 ಬ್ರಿಗೇಡ್ ರಸ್ತೆ, ಬೆಂಗಳೂರು – 560025, ಕರ್ನಾಟಕ.


# ಸುವರ್ಣ ಸಂಭ್ರಮ

ಎಸ್ ಜೆ ಸಿ ಸಿ
ಬೆಂಗಳೂರು
೧೯೭೨-೨೦೨೨

ಶೈಕ್ಷಣಿಕ ಉನ್ನತಿ / ವ್ಯಕ್ತಿತ್ವ ವಿಕಸನ / ಸಾಮಾಜಿಕ ಕಾಳಜಿ

## ಕನ್ನಡ ವಿಭಾಗ

“ಇಪ್ಪತ್ತೊಂದನೇ ಶತಮಾನದ ಕನ್ನಡ ಸಾಹಿತ್ಯ / ಸಿನಿಮಾ/ ರಂಗಭೂಮಿಯ ನಾಯಕ / ನಾಯಕಿಯರು”

**Emerging Protagonists of 21st Century Kannada Literature/ Film/ Theatre**

ಕುರಿತ

‘ರಾಷ್ಟ್ರೀಯ ವಿಚಾರ ಸಂಕಿರಣ’

ದಿನಾಂಕ 13 ಮತ್ತು 14 / ಮೇ / 2022



## ಸುವರ್ಣ ಸಂಭ್ರಮದಲ್ಲಿ ಕಾಲೇಜು

ಸಂತ ಜೋಸೆಫರ ವಾಣಿಜ್ಯ ಕಾಲೇಜು ಬೆಂಗಳೂರಿನ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆ. 1972 ರಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸತೊಡಗಿ, ಇದೀಗ ಐವತ್ತು ವಸಂತಗಳ ಸಂಭ್ರಮದಲ್ಲಿದೆ. ಸಂಸ್ಥೆಯು ಯು.ಜಿ.ಸಿ. ಅಧಿನಿಯಮದ ಸೆಕ್ಷನ್ 2(ಜಿ) ಮತ್ತು 12 ಅಡಿಯಲ್ಲಿ ಮಾನ್ಯತೆ ಪಡೆದು, ಅಕ್ಟೋಬರ್ 2004 ರಲ್ಲಿ ಸ್ವಾಯತ್ತ ಸಂಸ್ಥೆಯಾಯಿತು. ಕಾಲೇಜನ್ನು ಫೆಬ್ರವರಿ 2010 ರಲ್ಲಿ ಯು.ಜಿ.ಸಿ. ಯಿಂದ 'ಶ್ರೇಷ್ಠತೆಯ ಸಾಮರ್ಥ್ಯ ಹೊಂದಿದ ಕಾಲೇಜು' ಎಂದು ಮಾನ್ಯತೆ ನೀಡಲಾಯಿತು.

ಕಾಲೇಜು ತನ್ನ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯ ಉದ್ದೇಶದಿಂದ, ಶೈಕ್ಷಣಿಕ ಉನ್ನತಿ, ವ್ಯಕ್ತಿತ್ವ ವಿಕಸನ, ಸಾಮಾಜಿಕ ಕಾಳಜಿಯನ್ನು ಬೆಳೆಸಿ ಕ್ರಿಯಾಶೀಲ ಯುವ ಜನಾಂಗವಾಗಿ ರೂಪಿಸುವ ಉದ್ದೇಶ ಹೊಂದಿದೆ. 'ನಂಬಿಕೆ ಮತ್ತು ಶ್ರಮ' ಕಾಲೇಜಿನ ಧ್ಯೇಯ ಮತ್ತು ಶೈಕ್ಷಣಿಕ ಸಂಕಲ್ಪದ ಹಿಂದಿನ ಸ್ಫೂರ್ತಿಯಾಗಿದೆ. ಪ್ರಸ್ತುತ ಇದು ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತಿನಿಂದ ಎ++ ದರ್ಜೆಯನ್ನು ಪಡೆದು ಉನ್ನತ ಶಿಕ್ಷಣ ಕ್ಷೇತ್ರ ಮತ್ತು ವಾಣಿಜ್ಯ ವ್ಯವಹಾರ ಕ್ಷೇತ್ರದ ಬೆಳವಣಿಗೆಗೆ ಗಮನಾರ್ಹವಾಗಿ ಸ್ಪಂದಿಸಿದೆ. ಈ ಸಾಮಾಜಿಕ ಮತ್ತು ಶೈಕ್ಷಣಿಕ ಸಾಧನೆಯ ಹಿನ್ನೆಲೆಯನ್ನು ಸಂಭ್ರಮವಾಗಿಸಲು ಈ ಸಂಸ್ಥೆಯು ವಿಚಾರ ಸಂಕಿರಣ, ಕಲಾ ಶಿಬಿರಗಳು, ಸಾಮಾಜಿಕ ಅರಿವಿನ ಕಾರ್ಯಗಳು ಈ ರೀತಿಯ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

## ಕನ್ನಡ ವಿಭಾಗದ ಬಗ್ಗೆ :

ಕನ್ನಡ ವಿಭಾಗ ಕಾಲೇಜಿನ ಧ್ಯೇಯವಾದ ನಂಬಿಕೆ ಮತ್ತು ಶ್ರಮ ಪರಿಕಲ್ಪನೆಯಡಿ ತನ್ನ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಸಾಹಿತ್ಯ ಬೋಧನೆಯ ಜೊತೆಗೆ ಜೀವನ ಕೌಶಲ್ಯ ಮತ್ತು ವ್ಯಕ್ತಿತ್ವ ವಿಕಸನ ಚಟುವಟಿಕೆಗಳು ಕನ್ನಡ ವಿಭಾಗದ ಹೆಗ್ಗಳಿಕೆಯಾಗಿವೆ. ನಿರಂತರವಾಗಿ ಸಾಹಿತ್ಯಕ ವಿಚಾರ ಸಂಕಿರಣಗಳು, ಜನಪದ ಕಲೆಗಳ ಪರಿಚಯಾತ್ಮಕ ಚಟುವಟಿಕೆಗಳು ,ಅಧ್ಯಯನ ಶಿಬಿರಗಳು, ಕಲಿಕೆಯ ಸಾಧನವಾಗಿ ರಂಗಕಲೆಯ ಅಳವಡಿಕೆ ಇವೆಲ್ಲಾ ವಿಭಾಗದ ಕ್ರಿಯಾಶೀಲತೆಗೆ ಸಾಕ್ಷಿಯಾಗಿವೆ. ಈಗಾಗಲೇ ನಾಡಿನ ಪ್ರಸಿದ್ಧ ಬರಹಗಾರರ ಪುಸ್ತಕಗಳನ್ನು ವಿಭಾಗದ ಮೂಲಕ ಪ್ರಕಟಿಸಲಾಗಿದೆ.

## ವಿಚಾರ ಸಂಕಿರಣದ ಬಗ್ಗೆ

ಸಾಹಿತ್ಯ, ಸಿನಿಮಾ ಹಾಗೂ ರಂಗಭೂಮಿಗಳನ್ನು ಆದರ್ಶದ ನೆಲೆಯಲ್ಲಿ ಅರ್ಥೈಸುವ ರೂಢಿಗತವಾದ ನೋಟ ಕ್ರಮಗಳಲ್ಲಿ ಸಮಕಾಲೀನ ಸಂದರ್ಭವೂ ಸಿಲುಕಿದಂತಿದೆ. ಇವು ಪ್ರಭಾವಿ ಸಾಂಸ್ಕೃತಿಕ ಮಾಧ್ಯಮಗಳಷ್ಟೇ ಅಲ್ಲದೆ ಸಮಾಜದ ಆಗುಹೋಗುಗಳನ್ನು ಕಟ್ಟಿಕೊಡುವ ಸೃಜನಶೀಲ ಶಕ್ತಿಕೇಂದ್ರಗಳೂ ಹೌದು ಎಂಬಂತೆ ಪರಿಭಾವಿಸಲಾಗುತ್ತದೆ. ಇವುಗಳ ಮೂಲಕ ಸಮಾಜದ ಪ್ರತಿನಿಧೀಕರಣ ನಿರೂಪಣೆಗೊಳ್ಳುತ್ತಿರುತ್ತದೆ ಎಂದು ತಿಳಿಯಲಾಗುತ್ತಿದೆ. ಆದರೆ ನಮ್ಮ ವರ್ತಮಾನದಲ್ಲಿ ನಿರೂಪಣೆಗೊಳ್ಳುತ್ತಿರುವ ಕಲಾಮಾಧ್ಯಮ ಈ ದಿಕ್ಕಿನಲ್ಲಿದೆಯೇ? ಎಂಬುದನ್ನು ಪರಿಶೀಲಿಸಲು ತೊಡಕಾಗುತ್ತಿರುವುದು ಕೂಡ ಈ ಸಿದ್ಧಮಾದರಿಯ ನೋಟಕ್ರಮಗಳೇ ಎನ್ನುವುದನ್ನು ಅರಿಯಬೇಕಾದ ಸಂದರ್ಭದಲ್ಲಿ ನಾವಿದ್ದೇವೆ ಎನಿಸುತ್ತದೆ.

ಇಪ್ಪತ್ತನೇ ಶತಮಾನದುದ್ದಕ್ಕೂ ಸಾಹಿತ್ಯ, ಸಿನಿಮಾ ಹಾಗೂ ರಂಗಭೂಮಿಗಳು ಸೃಷ್ಟಿಸಿದ ನಾಯಕ ನಾಯಕಿಯರು ಕನ್ನಡ ಪ್ರಜ್ಞೆಯ ಭಾಗವಾಗಿದ್ದಾರೆ. ಇಂದಿರೆ, ಚೋಮ, ಹೂವಯ್ಯ, ಸೀತೆ, ಗುತ್ತಿ, ಅಮಾಸ, ಕುಸುಮ, ತಬರ, ರಫಿ, ಜಯಂತಿ, ಹಾಗೆ ಸಿನಿಮಾ ಮತ್ತು ರಂಗಭೂಮಿಯಲ್ಲಿ ಕೇಂದ್ರಕ್ಕೆ ಬರುತ್ತಿರುವ ಲೈಂಗಿಕ ಅಲ್ಪಸಂಖ್ಯಾತ, ದಲಿತ, ಮಕ್ಕಳ ಮತ್ತು ಮಹಿಳೆಯ ಪಾತ್ರಗಳು. ಉದಾಹರಣೆಗೆ ಅವನಲ್ಲ ಅವಳು, ರೈಲ್ವೆ ಚಿಲ್ಡ್ರನ್, ಕನಸೆಂಬೋ ಕುದುರೆಯನೇರಿ, ದ್ವೀಪ ಮುಂತಾದ ಚಿತ್ರಗಳ ಪಾತ್ರಗಳು ಹಾಗೆ ಉಪೇಂದ್ರ ನಟನೆಯ ವಿಕ್ಷಿಪ್ತ ಮನಸ್ಥಿತಿಯ ಬುದ್ಧಿವಂತ ಚಿತ್ರದಂತಹ ಪಾತ್ರಗಳು, ಪುನೀತ್ ನಟನೆಯ ಸಾಮಾಜಿಕ ಮತ್ತು ಕೌಟುಂಬಿಕ ಕಳಕಳಿಯ ದೊಡ್ಮನೆ ಹುಡುಗ ಚಿತ್ರದಂತಹ ಪಾತ್ರ, ದರ್ಶನ್, ಸುದೀಪ್ ರಂತಹ ನಟರ ಕೆಂಪೇಗೌಡ, ರಾಯಣ್ಣ ಮುಂತಾದ ಜನಪ್ರಿಯ ಪಾತ್ರಗಳು ಹೀಗೆ ಹಲವು ಪಾತ್ರಗಳು ಇಂದಿಗೂ ಕನ್ನಡ ಸಮಾಜ ಹಾಗೂ ಕನ್ನಡ ಸಂಸ್ಕೃತಿ ಚರ್ಚೆಗಳ ಕೇಂದ್ರವೂ ಆಗಿದ್ದಾವೆ. ಈ ಪಾತ್ರಗಳ ಮೂಲಕ ಲೇಖಕ, ಲೇಖಕರ ಮೂಲಕ ಸಮುದಾಯ, ಸಮುದಾಯದ ಮೂಲಕ ಹಲವು ಭೌಗೋಳಿಕ ಸಮಾಜಗಳನ್ನು ಒಳಗೊಳ್ಳುವ ಮಾತುಕತೆಗಳು ಇಂದಿಗೂ ನಡೆಯುತ್ತಿವೆ.

ಆದರೆ ಇಪ್ಪತ್ತೊಂದನೇ ಶತಮಾನದಲ್ಲಿ ರಚನೆಯಾಗುತ್ತಿರುವ ಕೃತಿಗಳ ಪಾತ್ರಗಳನ್ನು ಹೀಗೆ ನಮ್ಮ ಚರ್ಚೆಗಳ ಭಾಗವಾಗಿಸಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ನಮ್ಮ ಸಂದರ್ಭದಲ್ಲಿ ರಚನೆಯಾಗುತ್ತಿರುವ ಕೃತಿ ಜಗತ್ತೋ? ಅಥವಾ ಸಾಹಿತ್ಯ ವಿಮರ್ಶೆ ಸಮಕಾಲೀನ ಸಂದರ್ಭದಲ್ಲಿ ರಚನೆಯಾಗುತ್ತಿರುವ ಕೃತಿಗಳನ್ನು ಸಾಂಸ್ಕೃತಿಕ ವಿದ್ಯಮಾನಗಳಂತೆ ಚರ್ಚಿಸದೆ ಕೇವಲ ಸಾರಾಂಶವಾದಿಯಾಗಿಸಿರುವುದೋ? ಅಥವಾ ಈ ಕಾಲಘಟ್ಟಕ್ಕೆ ಕಲಾ ಪ್ರಕಾರಗಳು ಅಷ್ಟು ಮುಖ್ಯವೆಂದು ಅನಿಸುತ್ತಿಲ್ಲದಿರುವುದೋ? ಇಂತಹ ಹಲವು ಪ್ರಶ್ನೆಗಳ ಮೂಲಕ ಇಂದಿನ ಸಂದರ್ಭವನ್ನು ಗ್ರಹಿಸಿರುವುದೋ ? ಎನಿಸುತ್ತದೆ.

ಹೊಸ ತಲೆಮಾರು ತಾನು ಅಭಿವ್ಯಕ್ತಿಸಲು ಬೇಕಾದ ವಸ್ತು, ತಂತ್ರ, ಶೈಲಿ, ವೈಚಾರಿಕ ಗೊಂದಲಗಳನ್ನು ಅನುಭವಿಸುತ್ತಲೇ ಸೃಜನಶೀಲ ಅಭಿವ್ಯಕ್ತಿಯಲ್ಲಿ ತೊಡಗಿದೆ. ಇದರಿಂದಾಗಿ ಇಂದು ಸೃಷ್ಟಿಯಾಗುತ್ತಿರುವ ಹಲವು ವಿಕ್ಷಿಪ್ತಗಳಿಗೆ ಹಲವರು ಸೃಜಶೀಲ ಅಭಿವ್ಯಕ್ತಿಯನ್ನು ತೋರುತ್ತಿದ್ದರೂ ಒಂಟಿದನಿಯಂತೆ ಕೇಳುತ್ತಿದೆ. ಹಲವು ಕ್ಷೇತ್ರಗಳು ವರ್ತಮಾನದಲ್ಲಿ ನಡೆಸುತ್ತಿರುವ ಪ್ರಯೋಗಗಳು ಕೂಡ ಈ ಬಿಕ್ಕಟ್ಟಿನಿಂದ ಪಾರಾದಂತೆ ತೋರುರುವುದಿಲ್ಲ. ಈ ಬಿಕ್ಕಟ್ಟೇ  ಇಂದು ಜಾಗತೀಕರಣ, ಕೋಮುವಾದ, ಬಹುಸಂಖ್ಯಾತವಾದಗಳು ಗೆಲ್ಲಲು ನೆರವಾಗುತ್ತಿರಬಹುದೇ? ಜಾತಿ ಬಹಿಷ್ಕಾರಗಳು, ಮಹಿಳೆಯ ಮೇಲಿನ ಕ್ರೌರ್ಯ, ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳು ನಿತ್ಯ ವಿದ್ಯಮಾನವಾಗಿರುವ ಈ ಸಂದರ್ಭವನ್ನು ಸಾಹಿತ್ಯ ಸಿನಿಮಾ ಹಾಗೂ ರಂಗಭೂಮಿಗಳು ಎದುರಾಗಬಹುದಾದ ಸಾಧ್ಯತೆಗಳ ಹುಡುಕಾಟ ಮತ್ತು ಇಪ್ಪತ್ತೊಂದನೇ ಶತಮಾನದಲ್ಲಿ ಈ ಆತಂಕ ಮತ್ತು ವಿದ್ಯಮಾನಗಳನ್ನು ಪ್ರತಿನಿದಿಸಬಹುದಾದ ಪಾತ್ರಗಳ ಅವಲೋಕನ ಈ ವಿಚಾರ ಸಂಕಿರಣದ ಆಶಯವಾಗಿದೆ.

**ಅವಲೋಕನದ ವಿಷಯಗಳು:**

1. ಇಪ್ಪತ್ತೊಂದನೇ ಶತಮಾನದ ಕಥನ ನಿರೂಪಣಾ ವಿನ್ಯಾಸಗಳು ಮತ್ತು ಪಾತ್ರ ನಿರ್ಮಾಣ ಕ್ರಮ.
2. ಕನ್ನಡ ವಿಮರ್ಶೆಯಲ್ಲಾಗಿರುವ ಪಲ್ಲಟಗಳು.
3. ವಿಮರ್ಶೆಯ ಹೊಸ ಪರಿಭಾಷೆ : ಬದಲಾಗಿರುವ ಕೃತಿಯ ಕಣ್ನೋಟ.
4. ವ್ಯಕ್ತಿ, ಸಮುದಾಯ ಹಾಗೂ ಲೇಖಕ ಚಹರೆಗಳ ನಿರ್ಮಿತಿ.
5. ಸಮಕಾಲೀನ ಸಾಹಿತ್ಯ ತತ್ವ ಸಂವಾದ ಮತ್ತು ಅನುಸಂಧಾನ ಕ್ರಮಗಳು.
6. ನಮ್ಮನ್ನು ಕಾಡುತ್ತಿರುವ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳು ಮತ್ತು ಸಮಾಜ
7. ಸೃಜನಶೀಲತೆ– ಹೊಸ ತಲೆಮಾರಿನ ಸವಾಲುಗಳು.
8. ಈ ಶತಮಾನದ ಪ್ರಾತಿನಿಧಿಕ ಪಾತ್ರಗಳು–ಸಿನಿಮಾ ರಂಗಭೂಮಿ ಮತ್ತು ಸಾಹಿತ್ಯ.
9. ಇಪ್ಪತ್ತೊಂದನೇ ಶತಮಾನದ ಅಂಚಿನ ಪಾತ್ರಗಳು.
10. ಕಾಲದ ಪ್ರತಿಮೆಗಳಾಗಿ ಕಾವ್ಯ, ನಾಟಕ, ಕಥಾ ಪಾತ್ರಗಳು.
11. ಈ ಕಾಲದ ಸಾಹಿತ್ಯಕ ಮತ್ತು ಸಾಮಾಜಿಕ ವಾಗ್ವಾದಗಳು.
12. ವಿಜೃಂಭಣೆ ಮತ್ತು ಸಂವೇದನೆ: ಬದಲಾಗುತ್ತಿರುವ ರಂಗಶಿಲ್ಪ.

**ಸಂಶೋಧನಾ ಪ್ರಬಂಧಗಳ ಮಂಡನೆಯ ನಿಯಮಗಳು**

1. ಲೇಖನಗಳು ಮತ್ತು ಪ್ರಬಂಧ ಮಂಡನೆಗಳು 2000ದ ಇಸವಿ ನಂತರದ ಅಂದರೆ ಇಪ್ಪತ್ತೊಂದನೇ ಶತಮಾನದ ಈ ಎರಡು ದಶಕಗಳಲ್ಲಿ ಪ್ರಕಟಗೊಂಡ ಕೃತಿಗಳನ್ನು ಮಾತ್ರವೇ ಆದರಿಸಿರಬೇಕು.
2. ಲೇಖನಗಳು ಮೌಲಿಕವಾಗಿರಬೇಕು ಮತ್ತು  ಸ್ಪಷ್ಟತೆಯಿಂದ ಕೂಡಿರಬೇಕು.  ಪರಿಕಲ್ಪನೆಗಳ ಮಾದರಿಗಳನ್ನು ಒಳಗೊಳ್ಳುವುದು ಅಪೇಕ್ಷಣೀಯ.
3. ಆಯ್ಕೆಯಾದ ಸಾರಲೇಖಗಳು ಮತ್ತು ಪೂರ್ಣಗೊಂಡ ಲೇಖನಗಳನ್ನು ವಿಷಯತಜ್ಞರು ಪರಿಶೀಲಿಸಿ, ಅವರು ನೀಡುವ ಸಲಹೆಗಳನ್ನು ಪ್ರಬಂಧಕಾರರು ಸ್ವೀಕರಿಸಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದಾಗಿದೆ.
4. ಲೇಖನಗಳು 2500 – 3000 ಪದಗಳ ಗರಿಷ್ಠ ಮಿತಿಯನ್ನು ಮೀರಬಾರದು.
5. ಲೇಖನಗಳನ್ನು ನುಡಿ ಯೂನಿಕೋಡಿನಲ್ಲಿ 12 Font ಸೈಜ್ ನಲ್ಲಿ D.T.P ಮಾಡಿ ಕಡ್ಡಾಯವಾಗಿ ಅಕ್ಷರ ದೋಷಗಳು ಇಲ್ಲದಂತೆ ನೋಡಿ ಕಳಿಸಬೇಕು.
6. ಅಕ್ಷರ ದೋಷ ಮತ್ತು ತಪ್ಪು ಮಾಹಿತಿಯುಳ್ಳ ಲೇಖನಗಳನ್ನು ತಿರಸ್ಕರಿಸಲಾಗುವುದು.
7. ಪ್ರಬಂಧ ಮಂಡನೆ ಸಮಯದಲ್ಲಿ ಪ್ರಬಂಧವನ್ನು ಹತ್ತು ನಿಮಿಷಕ್ಕೆ ಸಂಕ್ಷಿಪ್ತಗೊಳಿಸಿ ಮಂಡಿಸಬೇಕು.
8. ಆಯ್ಕೆಯಾದ ಲೇಖನಗಳನ್ನು ಉದ್ಘಾಟನೆಯ ಸಮಯದಲ್ಲಿ ISBN ನಂಬರ್‌ನೊಂದಿಗೆ ಪುಸ್ತಕ ಬಿಡುಗಡೆ ಮಾಡಲಾಗುವುದು.
9. ಲೇಖನಗಳು – ಉಲ್ಲೇಖ, ಅಡಿಟಿಪ್ಪಣಿ, ಆಕರ ಹಾಗೂ ಪರಾಮರ್ಶನ ಗ್ರಂಥಗಳನ್ನು ಹೊಂದಿರಬೇಕು. ಕೃತಿಚೌರ್ಯ ಮತ್ತು ದೋಷಪೂರಿತ ಆಗಿರಬಾರದು.
10. ಆಯ್ಕೆಯಾದ ಲೇಖಕರು  ಪ್ರಬಂಧ ಮಂಡನೆ, ಪುಸ್ತಕದ ಒಂದು ಪ್ರತಿ, ಸಂಕಿರಣದ ಕಿಟ್ . ಊಟೋಪಚಾರದ ಬಾಬ್ತುಗಳಿಗಾಗಿ ಪ್ರಾಧ್ಯಾಪಕರು 800 ರೂ.ಗಳನ್ನು, ವಿದ್ಯಾರ್ಥಿ/ನಿ ಅಥವಾ ಸಂಶೋಧಕರಾದರೆ 500 ರೂಗಳನ್ನು  ಪಾವತಿಸಬೇಕಾಗಿರುತ್ತದೆ.

| ಸಾರ ಲೇಖನಗಳ ಆಹ್ವಾನ | |
|---|---|
| ಆಯ್ಕೆಯಾದ ಸಾರಲೇಖಗಳ ಮಾಹಿತಿ | 20, ಏಪ್ರಿಲ್, 2022 |
| ಪೂರ್ಣ ಲೇಖನಗಳನ್ನು ಕಳಿಸುವ ಕೊನೆ ದಿನಾಂಕ | 25, ಏಪ್ರಿಲ್, 2022 |
| ಆಯ್ಕೆಗೊಂಡ/ತಿರಸ್ಕೃತಗೊಂಡ ಲೇಖನಗಳ ಮಾಹಿತಿ | 30, ಏಪ್ರಿಲ್, 2022 |
| ತಿದ್ದುಪಡಿ ಮಾಡಿದ ಲೇಖನಗಳ ಸ್ವೀಕೃತಿಯ ಕೊನೆ ದಿವಸ | 05, ಮೇ, 2022 |
| ವಿಚಾರ ಸಂಕಿರಣದ ದಿನಾಂಕ | 13 ರಿಂದ 14 , ಮೇ ,2022 |

## ವಿಚಾರ ಸಂಕಿರಣದ ಪೋಷಕರು

**ರೆ.ಫಾ. ಬ್ರೆಯಾನ್ ಪೆರೇರಾ ಯೇ.ಸ.**
ಉಪಾಧ್ಯಕ್ಷರು
ಬೆಂಗಳೂರು ಜೆಸ್ವಿಟ್ ಎಜುಕೇಶನ್
ಸೊಸೈಟಿ.

**ಡಾ.ಚಾರ್ಲ್ಸ್ ಲಸ್ರಾಡೋ ಯೇ.ಸ.**
ಪ್ರಾಂಶುಪಾಲರು
ಸಂತ ಜೋಸೆಫರ ವಾಣಿಜ್ಯ
ಕಾಲೇಜು

**ರೆ.ಫಾ.ಪ್ರದೀಪ್ ಆಂತೋನಿ ಯೇ.ಸ.**
ಹಣಕಾಸು ಅಧಿಕಾರಿಗಳು
ಸಂತ ಜೋಸೆಫರ ವಾಣಿಜ್ಯ
ಕಾಲೇಜು

## ವಿಚಾರ ಸಂಕಿರಣದ ಸಂಚಾಲಕರು

**ಡಾ. ಟಿ.ಹೆಚ್ ಲವಕುಮಾರ್**
ಮುಖ್ಯಸ್ಥರು, ಕನ್ನಡ ವಿಭಾಗ
ಸಂತ ಜೋಸೆಫರ ವಾಣಿಜ್ಯ ಕಾಲೇಜು

## ವಿಚಾರ ಸಂಕಿರಣದ ಸಲಹಾ ಮಂಡಳಿ

**ಪ್ರೊ. ಮುಕ್ತಾ**
ಶೈಕ್ಷಣಿಕ ಸಂಚಾಲಕರು
ಸುವರ್ಣ ಸಂಭ್ರಮ ಸಮಾರಂಭ

**ಡಾ. ಪ್ರಕಾಶ್ ಮಂಟೇದ**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪದವಿ ಕಾಲೇಜು
ದೊಡ್ಡಬಳ್ಳಾಪುರ

**ಡಿ. ಆರ್ ದೇವರಾಜ್**
ಉಪಾನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ಅರಳಾಳುಸಂದ್ರ, ಚನ್ನಪಟ್ಟಣ ತಾ॥

## ಸಹ ಸಂಚಾಲಕರು

**ಡಾ.ಟಿ.ಹನುಮಂತರಾಯ.**
ಸಹಾಯಕ ಅಧ್ಯಾಪಕರು

**ಟಿ.ಎ.ಅಶೋಕ**
ಸಹಾಯಕ ಅಧ್ಯಾಪಕರು

**ನೊಂದಣಿ ಶುಲ್ಕ**

| ವಿವರ | ಒಟ್ಟುಮೊತ್ತ |
|---|---|
| ಸಂಶೋಧನಾ ವಿದ್ಯಾರ್ಥಿಗಳಿಗೆ | 500 |
| ಅಧ್ಯಾಪಕರಿಗೆ | 800 |

**ಬ್ಯಾಂಕಿನ ವಿವರಗಳು**

**ಈ ಕೆಳಗೆ ನೀಡಿದ ಬ್ಯಾಂಕಿನ ಮೂಲಕ ಅಭ್ಯರ್ಥಿಗಳು ಹಣ ಸಂದಾಯ ಮಾಡಬಹುದು**

| Banking Details | Savings Bank Account |
|---|---|
| **IFSC** | **BARB0BRIGAD (5TH Character is ZERO)** |
| Account Name | Bangalore Jesuit Educational Society |
| **Account Number** | **06650100009876** |
| Bank | BANK OF BARODA,<br>Brigade Road Branch,<br>Brigade Road,<br>BANGALORE - 560 025 |

SCAN TO PAY
WITH ANY BHIM UPI APP

**ಹಣ ಪಾವತಿಸಿದ ನಂತರ ಈ ವಿಳಾಸಕ್ಕೆ ಮಿಂಚಂಚೆ ಮಾಡಿ**
***chiefaccountant@sjcc.edu.in & kannadadept@sjcc.edu.in***
**ಈ ನಂಬರಿಗೆ 9480124419 ವಿಳಾಸದೊಂದಿಗೆ what's app ಮಾಡತಕ್ಕದ್ದು.**

JOIN OUR WHATSAPP GROUP NOW

Click Here To Register

**ಸಂಪರ್ಕಕ್ಕಾಗಿ :–**

ಡಾ.ಟಿ.ಹೆಚ್.ಲವಕುಮಾರ್ – 9902100881,
ಟಿ.ಎ.ಅಶೋಕ – 8073984184 ಡಾ.ಟಿ.ಹನುಮಂತರಾಯ – 9480124419
kannadadept@sjcc.edu.in